CAREERINDIA

| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ]
Total No. of Questions : 54 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 62-K**
**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ
# Subject : Third Language — KANNADA

ದಿನಾಂಕ : 21. 06. 2013 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 21. 06. 2013
[ Time : 9-30 A.M. to 12-15 P.M.
[ Max. Marks : 100

## FOR OFFICE USE ONLY

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.careerindia.com

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ''ಮಂಜುಳ ಮತ್ತು ನಾನು ಇಬ್ಬರು ಸೇರಿ ಊರಿಗೆ ಹೋದೆವು''. — ಈ ವಾಕ್ಯದಲ್ಲಿರುವ ಅಂಕಿತನಾಮ

(ಎ) ನಾನು (ಬಿ) ಇಬ್ಬರು ಸೇರಿ

(ಸಿ) ಊರಿಗೆ (ಡಿ) ಮಂಜುಳ

*ಉತ್ತರ :* ____________________



CAREERINDIA www.careerindia.com

CAREERINDIA



2. ಕೆಳಗಿನವುಗಳಲ್ಲಿ ಸರ್ವನಾಮವನ್ನು ಗುರುತಿಸಿ

(ಎ) ಅವರು (ಬಿ) ರಮೇಶ

(ಸಿ) ವಕೀಲ (ಡಿ) ಕುರುಡ

*ಉತ್ತರ :* ____________________

3. ''ಬರಲಿಲ್ಲವೇ ನಿನ್ನ ತಾಯಿ''. — ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ

(ಸಿ) ಅಲ್ಪವಿರಾಮ (ಡಿ) ಉದ್ಧರಣ

*ಉತ್ತರ :* ____________________

4. 'ನೀನೀಗ' — ಈ ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ ?

(ಎ) ಆಗಮ ಸಂಧಿ (ಬಿ) ಆದೇಶ ಸಂಧಿ

(ಸಿ) ಲೋಪ ಸಂಧಿ (ಡಿ) ವೃದ್ಧಿ ಸಂಧಿ

*ಉತ್ತರ :* ____________________

5. 'ಕೇಳು' — ಈ ಪದದ ನಿಷೇಧಾರ್ಥಕ ರೂಪ

(ಎ) ಕೇಳುತ್ತಾನೆ (ಬಿ) ಕೇಳನು

(ಸಿ) ಕೇಳುವುದಿಲ್ಲ (ಡಿ) ಕೇಳಿದ

*ಉತ್ತರ :* ____________________

6. 'ಕಿವಿಗೊಡು' — ಈ ನುಡಿಗಟ್ಟಿನ ಅರ್ಥ

(ಎ) ಗಮನವಿಟ್ಟು ಆಲಿಸು (ಬಿ) ಕಿವಿಯನ್ನು ಕೊಡು

(ಸಿ) ಕೇಳಿಸಿಕೊಳ್ಳು (ಡಿ) ಗಮನಿಸದಿರು

*ಉತ್ತರ :* ____________________

www.careerindia.com

7. ಮಕ್ಕಳು ಗ್ರಂಥಾಲಯದಲ್ಲಿ ಪುಸ್ತಕವನ್ನು ಓದುತ್ತಿದ್ದಾರೆ . ಅಡಿ ಗೆರೆ ಎಳೆದ ಪದದ ಧಾತು

(ಎ) ಓದಿದ (ಬಿ) ಓದುತ್ತಾನೆ

(ಸಿ) ಓದುವುದಿಲ್ಲ (ಡಿ) ಓದು

ಉತ್ತರ :

8. 'ವಿಫಲತೆ' — ಈ ಪದದ ವಿರುದ್ಧಾರ್ಥಕ ಪದ

(ಎ) ಅಸಫಲತೆ (ಬಿ) ಅವಿಫಲತೆ

(ಸಿ) ಸಫಲತೆ (ಡಿ) ಫಲತೆ

ಉತ್ತರ :

9. ''ರಂಗಣ್ಣ ಕಾಲೇಜಿನಿಂದ ಮೈಸೂರಿಗೆ ಪ್ರವಾಸ ಹೋಗಿದ್ದನು''. — ಈ ವಾಕ್ಯದಲ್ಲಿರುವ ಅನ್ಯದೇಶ್ಯ ಪದ

(ಎ) ರಂಗಣ್ಣ (ಬಿ) ಕಾಲೇಜು

(ಸಿ) ಮೈಸೂರಿಗೆ (ಡಿ) ಪ್ರವಾಸ

ಉತ್ತರ :

10. 'ತರುಣ' — ಈ ಪದದ ಅನ್ಯಲಿಂಗ ರೂಪ

(ಎ) ತರಣ (ಬಿ) ತಾರುಣ

(ಸಿ) ತರುಣಿ (ಡಿ) ಅರಣಿ

ಉತ್ತರ :

11. ''ನಿಂತಾವು'' — ಈ ಪದದ ಗ್ರಾಂಥಿಕ ರೂಪ

(ಎ) ನಿಲ್ಲುತ್ತವೆ (ಬಿ) ನಿಲ್ಲುತ್ತಿವೆ

(ಸಿ) ನಿಲ್ಲುವುದಿಲ್ಲ (ಡಿ) ನಿಂತಿವೆ

ಉತ್ತರ :



www.careerindia.com

CAREERINDIA



12. ಎರಡು ಭಿನ್ನ ವಸ್ತುಗಳಿಗಿರುವ ಗುಣಸ್ವಭಾವಗಳ ಹೋಲಿಕೆಯನ್ನು ಮಾಡಿ ಹೇಳುವ ಅಲಂಕಾರವೇ

(ಎ) ರೂಪಕ (ಬಿ) ದೃಷ್ಟಾಂತ

(ಸಿ) ಉಪಮಾ (ಡಿ) ಉತ್ಪ್ರೇಕ್ಷೆ

*ಉತ್ತರ :* ______________________________

13. 'ಜನ್ಮ' — ಈ ಪದದ ಬಹುವಚನ ರೂಪ

(ಎ) ಜನಾಂಗಗಳು (ಬಿ) ಜನರು

(ಸಿ) ಜನ್ಮಾಂತರ (ಡಿ) ಜನ್ಮಗಳು

*ಉತ್ತರ :* ______________________________

14. ಛಂದಶ್ಶಾಸ್ತ್ರದಲ್ಲಿ ಗುರು ಚಿಹ್ನೆಗಿರುವ ಮಾತ್ರೆಗಳ ಕಾಲ

(ಎ) ಒಂದು (ಬಿ) ಮೂರು

(ಸಿ) ಎರಡು (ಡಿ) ನಾಲ್ಕು

*ಉತ್ತರ :* ______________________________

15. 'ಕಾಲ' — ಈ ಪದದ ಸಮಾನಾರ್ಥಕ ಪದ

(ಎ) ಯಮ (ಬಿ) ಅಕಾಲ

(ಸಿ) ಸಕಾಲ (ಡಿ) ದುಷ್ಟಕಾಲ

*ಉತ್ತರ :* ______________________________

www.careerindia.com

CAREERINDIA



16. ಈ ಕೆಳಗಿನ 'ಅ' ಪಟ್ಟಿಯಲ್ಲಿನ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು 'ಬ' ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| ಅ | | ಬ | |
|---|---|---|---|
| i) | ದ್ವಿರುಕ್ತಿ | ಅ) | ಮರವನ್ನು |
| ii) | ಅನುಕರಣಾವ್ಯಯ | ಆ) | ರಾಯ |
| iii) | ತತ್ಸಮ | ಇ) | ಮರಕ್ಕೆ |
| iv) | ದ್ವಿತೀಯಾ ವಿಭಕ್ತಿ | ಈ) | ಜುಳುಜುಳು |
| v) | ಜೋಡು ನುಡಿ | ಉ) | ಆಗಸ |
| | | ಊ) | ಮತ್ತೆಮತ್ತೆ |
| | | ಋ) | ಪರ್ವತ |
| | | ಎ) | ಮನೆಮಠ |

*ಉತ್ತರಗಳು :* i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಹಿತ್ತಲ ಗಿಡ ..........................................................................................

18. ಅರ್ಥವಿಲ್ಲದ ಓದು ..........................................................................................

19. ಶ್ರೀಮತಿ ಲೀಲಾವತಿ ಎಸ್. ರಾವ್‌ರವರ ಪ್ರವಾಸ ಕಥನ ..........................................................

20. ''ಯುಗಾದಿ ಬರುವುದು ನಮಗೆಂದೆ ?'' ಪದ್ಯವನ್ನು ..........................................................
ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

21. ಪುರು ಪರಮೇಶನ ಹಿರಿಯ ಮಗ ..........................................................................

www.careerindia.com

CAREERINDIA



ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $8 \times 1 = 8$

22. ದೇವತೆ ಭರತ ಕುಮಾರನಿಗೆ ಕೊಟ್ಟ ಚಿನ್ನದ ಕೋಲಿನ ಮಹಿಮೆ ಏನು ?

23. ಕೃಷ್ಣದೇವರಾಯನು ತೆನಾಲಿ ರಾಮಕೃಷ್ಣನಿಗೆ ಸತ್ತು ಬದುಕಲು ಏಕೆ ಹೇಳಿದನು ?

24. ಸ್ತ್ರೀ ಪಾತ್ರ ಮಾಡುವುದಕ್ಕೆ ಬಿ.ವಿ. ಕಾರಂತರಿಗೆ ಏಕೆ ಮುಜುಗರವಾಗುತ್ತಿತ್ತು ?

25. ತಗಡೂರು ರಾಮಚಂದ್ರರಾಯರು ಮಾರಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದುದು ಏಕೆ ?

26. ಗಾಂಧೀಜಿಯವರು ಯಾವುದಕ್ಕೆ ತಮ್ಮ ಪ್ರಾಣವನ್ನು ಪೂರ್ಣಾಹುತಿಯನ್ನಾಗಿತ್ತರು ?

27. ಶಾಂತಾದೇವಿ ಕೆ. ಸಾಬಾದಿಯವರು ಅಂತರವಾಣಿಯನ್ನು ಆಲಿಸಲು ಏನು ಬೇಕೆಂದಿದ್ದಾರೆ ?

www.careerindia.com

CAREERINDIA



28. ಬೇವಿನ ಹಳ್ಳ ಎಲ್ಲಿ ತುಳುಕಾಡಿತು ಎಂದು ಹೊರೆಯಾಲ ದೊರೆಸ್ವಾಮಿಯವರು ಹೇಳಿದ್ದಾರೆ ?

29. ನಾ. ಮೊಗಸಾಲೆಯವರ ಮಗ ಅಮೇರಿಕಾದಲ್ಲಿ ತಿರಸ್ಕರಿಸಿದ್ದೇನನ್ನು ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

30. ಪೂರ್ಣಿಮಾಳ ಸಮಸ್ಯೆಗೆ ಸನ್ಯಾಸಿ ಸೂಚಿಸಿದ ಪರಿಹಾರವೇನು ?

www.careerindia.com

CAREERINDIA



31. ಪೂರ್ಣಿಮ ಲಕ್ಷ್ಮಣಿಗೆಯ ಜನ್ಮರಹಸ್ಯದ ಬಗ್ಗೆ ವಿಚಾರ ಮಾಡಿ ಬಳಿಕ ಸಮಾಧಾನ ಪಟ್ಟುಕೊಂಡದ್ದು ಹೇಗೆ ?

32. ಕೇದಾರವನ್ನು ಏರುವಾಗ ಕುದುರೆಯವನು ಲೀಲಾವತಿ ಎಸ್. ರಾವ್‌ರವರಿಗೆ ನೀಡಿದ ಸಲಹೆ ಏನು ?

www.careerindia.com

CAREERINDIA



33. ತಗಡೂರು ರಾಮಚಂದ್ರರಾಯರು ಮಹಾರಾಜರ ನಿರಂಕುಶ ಪ್ರಭುತ್ವವನ್ನು ಹೇಗೆ ಪ್ರತಿಭಟಿಸಿದರು ?

34. ಎಂ.ಎಚ್. ಮರಿಗೌಡರ ಹೇರಾಸೆ ಏನು ?

www.careerindia.com

CAREERINDIA



35. ದೇಜಗೌರವರು 'ವೃಕ್ಷಪ್ರೇಮಿ'ಯ ಆಗಮನವನ್ನು ಕುರಿತು ಹೇಳಿರುವ ಮಾತುಗಳೇನು ?

36. ಭೂಮಿಯಲ್ಲಿ ವರ್ಷದಿಂದ ವರ್ಷ ಜಲಮಟ್ಟ ಕಡಿಮೆಯಾಗಲು ಕಾರಣವೇನು ?

www.careerindia.com

CAREERINDIA



37. ಮಳೆಕೊಯ್ಲಿನ ವಿಧಾನಗಳಾವುವು ?

38. ತೀ.ನಂ.ಶ್ರೀಯವರು ಗಾಂಧೀಜಿಯವರನ್ನು ಹಿರಿಯ ತಂದೆ ಎಂದು ಏಕೆ ಕರೆದಿದ್ದಾರೆ ?

www.careerindia.com

CAREERINDIA



39. ಬಳೆಗಾರನು ಬಾಲೆಗೆ ''ನಿನ್ನ ತವರೂರ ತೋರು ಬಾ'' ಎಂದು ಏಕೆ ಹೇಳಿದನು ?

40. ಹೊರೆಯಾಲ ದೊರೆಸ್ವಾಮಿಯವರು ಬಡವರ ಜೀವನ ಸಾವಿನ ಸೊತ್ತಾಗಿದೆ ಎಂದು ಏಕೆ ಹೇಳಿದ್ದಾರೆ ?

www.careerindia.com

CAREERINDIA



41. ವಿ.ಕೃ. ಗೋಕಾಕರು ಹಡಗನ್ನು ನವಖಂಡ ಎಂದು ಏಕೆ ಕರೆದಿದ್ದಾರೆ ?

42. ವಿ.ಕೃ. ಗೋಕಾಕರು ಹಡಗು ಯಾವ ಯಾವ ದೇಶವನ್ನು ಸಂಚರಿಸುತ್ತದೆ ಎಂದು ಹೇಳಿದ್ದಾರೆ ?



www.careerindia.com

CAREERINDIA



43. ನಾ. ಮೊಗಸಾಲೆಯವರನ್ನು ಕಂಡ ಹಿರಿಯರು 'ಅನಬೇಡಿ ಇಲ್ಲ !' ಎಂದು ಹೇಳಲು ಕಾರಣವೇನು ?

44. ಭರತೇಶನು ಇತರರಿಗಿಂತ ಭಿನ್ನವಾಗಿದ್ದ ಎಂಬುದನ್ನು ರತ್ನಾಕರನು ಹೇಳಿರುವ ಬಗೆ ಹೇಗೆ ?

www.careerindia.com

ಈ ಕೆಳಗೆ ಕೊಟ್ಟಿರುವ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $4 \times 3 = 12$

45. ''ಅರಮನೇಲೂ ನಿಮಗೆ ಒಂದು ಹೊತ್ತು ಕವಳ ಇಲ್ದೆ ಹೋಯ್ತೆ !''

46. 'ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ.'

www.careerindia.com

CAREERINDIA



47. ಕೊಂಡ್ಲೋಗೊ ಎನ್ನ ತವರೀಗೆ.

www.careerindia.com

48. ಮಾರುದ್ದ ನುಡಿವುದ ಕಂಡು ನಾ ಬೆರಗಾದೆನಯ್ಯ.

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 3 = 3

ಪಂಪ ಮಹಾಚಲ ________________

________________

________________

________________ ಹರಿಹರನ ಝುರಿ.

ಅಥವಾ



www.careerindia.com

CAREERINDIA



ಏನು ಕಾರಣ ______________________________________________

______________________________________________

______________________________________________

______________________________________________ವಿಠಲರಾಯನ್ನ.

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಭರತ ಕುಮಾರ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ತನ್ನ ತಾಯಿಯನ್ನು ಕಂಡುಕೊಂಡ ಬಗೆ ಹೇಗೆ ?

— ಬಿ.ವಿ. ಕಾರಂತರಿಗೆ ಬಾಲ್ಯದಲ್ಲಿ ಸಿಕ್ಕ ಕಲಾ ಶ್ರೀಮಂತಿಕೆ ಎಂತಹದ್ದು ?

— ಲೀಲಾವತಿ ಎಸ್. ರಾವ್‌ರವರು ಕೇದಾರವನ್ನು ಏರುವ ದಾರಿಯಲ್ಲಿ ಕಂಡ ಪ್ರಕೃತಿ ಸೌಂದರ್ಯವನ್ನು ವಿವರಿಸಿ.

50.

www.careerindia.com

CAREERINDIA



51.

52. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಮಾನವ ಜನ್ಮವು ಹೇಗೆ ದೊಡ್ಡದಾಗುವುದೆಂದು ಪುರಂದರದಾಸರು ಹೇಳಿದ್ದಾರೆ ?

— ಶಾಂತಾದೇವಿ ಕೆ. ಸಾಬಾದಿಯವರು ಮಾನವನ ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಕರೆಯಲು ಕಾರಣವೇನು ?

www.careerindia.com

CAREERINDIA



53. — ನೀವು ಭಟ್ಕಳದ ಸೊನಾರಕೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ/ನಿ, ಶಿವಯೋಗಿ / ಸುಮ ಎಂದು ತಿಳಿದು ಸಕಾರಣವನ್ನು ನೀಡಿ ಮೂರು ದಿನ ರಜೆ ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ (ಅರ್ಜಿ) ಪತ್ರ ಬರೆಯಿರಿ. $1 \times 5 = 5$

ಅಥವಾ

— ನೀವು ಗದಗಿನ ನಿವಾಸಿ ಮನೋಜ್ / ರಶ್ಮಿ ಎಂದು ತಿಳಿದು ಮಂಗಳೂರು ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ವಾಸವಾಗಿರುವ ನಿಮ್ಮ ಗೆಳೆಯ / ಗೆಳತಿಗೆ, ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

www.careerindia.com

CAREERINDIA



54. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ: $1 \times 5 = 5$

— ಕ್ರೀಡೆಯ ಮಹತ್ವ

— ಗಾಂಧಿ ಜಯಂತಿ

— ಜಲಮಾಲಿನ್ಯಕ್ಕೆ ಕಾರಣಗಳು

www.careerindia.com

CAREERINDIA



www.careerindia.com

www.careerindia.com